O.S. 208/2013
D.W.2

**ಸಾಕ್ಷಿಯನ್ನು ದಿನಾಂಕಃ 21-02-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು ವಾದಿ ಪರ ವಕೀಲರಿಂದಃ**

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಖಾಸಗಿಯಾಗಿ ಶಿಕ್ಷಣ ಪಡೆದಿದ್ದೇನೆ. ಈ ಕೇಸನ್ನು ಶಿವರಾಮಪ್ಪನು ಹನುಮಪ್ಪನ ವಿರುದ್ಧ ಹಾಕಿರುವನು. ಈ ಕೇಸನ್ನು ಜಾಗದ ಸಂಬಂಧ ಹಾಕಿರುವನು. ನನಗೆ ದಾವಾ ಆಸ್ತಿಯ ಸರ್ವೇ ನಂಬರ್ ಮತ್ತು ಕ್ಷೇತ್ರ ನೆನಪಿರುವುದಿಲ್ಲ. ಪೂರ್ವಕ್ಕೆ ಹೊನ್ನಮ್ಮಳ ಗೋಣೆಪ್ಪ ಇವರ ಜಮೀನು, ಪಶ್ಚಿಮಕ್ಕೆ ಹನುಮಪ್ಪನಿಗೆ ಸಂಬಂಧಿಸಿದ ಜಮೀನು, ಉತ್ತರಕ್ಕೆ ಪೋಲಿಸ್ ಠಾಣೆ ಹಾಗೂ ದಕ್ಷಿಣಕ್ಕೆ ಮಸೀದಿಗೆ ಸಂಬಂಧಿಸಿದ ಜಾಗ ಇರುವುದು. ಸದರಿ ಚೆಕ್ಕುಬಂದಿಗಳು ದಾವಾ ಆಸ್ತಿಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ವಾದಿಯರ ಕುಟುಂಬ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚಾಲ್ತಿ ಪಹಣಿ ಈಗ ಯಾರ ಹೆಸರಿನಲ್ಲಿದೆ ಎಂದು ನೆನಪಿರುವುದಿಲ್ಲ.

2 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಖರೀದಿ ಮಾಡಿದ ದಿನಾಂಕ ನನಗೆ ನೆನಪಿರುವುದಿಲ್ಲ. ನಾನು ಆ ಖರೀದಿ ಪತ್ರವನ್ನು ನೋಡಿದ್ದೇನೆ. ಸದರಿ ಖರೀದಿ ಪತ್ರದಲ್ಲಿ ಯಾರಾರು ಸಹಿ ಮಾಡಿರುವರು ಎಂದು ನನಗೆ ನೆನಪಿರುವುದಿಲ್ಲ. ನಾನು ಹೇಳಿದಂತೆ ಯಾವುದೇ ಖರೀದಿ ಪತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಶಿವರಾಮಪ್ಪನ ಹೆಸರಿನಲ್ಲಿದೆ ಎಂದು ಹೇಳಲಾದ ಆಸ್ತಿಯ ಡೋರ್ ನಂಬರ್ ನನಗೆ ನೆನಪಿರುವುದಿಲ್ಲ. ಶಿವರಾಮಪ್ಪನಿಗೂ ದಾವಾ ಆಸ್ತಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಅವರು ಎಂದಿಗೂ ದಾವಾ ಆಸ್ತಿಯ ಸ್ವಾಧೀನದಲ್ಲಿ ಎಂದಿಗೂ ಇಲ್ಲ ಮತ್ತು ಇರಲಿಲ್ಲ ಎಂದರೆ ಸರಿಯಲ್ಲ. ಶಿವರಾಮಪ್ಪ ಮತ್ತು ನಾನು ವಿಶ್ವಾಸಿಕರಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

21-02-2025

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**